ಹೀಗೆ. ನಮ್ಮ ಜೀವನದಲ್ಲಿ ಐಹಿಕ ವಿಷಯಗಳಿಗೆ ಬದಲಾಗಿ ಈ ಎಲ್ಲ ವಿಷಯಗಳಿಗೆ ಆದ್ಯತೆ ಕೊಡಬೇಕು ಎಂದು ಭಾವಿಸುವೆ.

◆ ನಿಮ್ಮ ಓದು, ಅಧ್ಯಯನದ ಬಗ್ಗೆ ಹೇಳುವಿರಾ?

ನಾನು ಕಾದಂಬರಿಗಳನ್ನು ಓದುವೆ. ತುಂಬಾ ಓದುವುದು ನನ್ನ ಇಷ್ಟದ ಕೆಲಸ. ನನಗೆ ಕಾವ್ಯವೆಂದರೆ ಬಹಳ ಇಷ್ಟ. ಕಾಳಿದಾಸ ಬರೆದ ಕಾವ್ಯವನ್ನು ಪದೇ ಪದೇ ಓದುತ್ತೇನೆ. ಸಿಲಪ್ಪದಿಕಾರಂ ಮತ್ತು ಸಂಗಂ ಸಾಹಿತ್ಯವೂ ನನಗೆ ಇಷ್ಟ. ಎಲ್ಲ ನೃತ್ಯ ಕಲಾವಿದರಿಗೂ ಜಯದೇವನ ಅಷ್ಟಪದಿ ಇಷ್ಟವಾದಂತೆ ನನಗೂ ಬಹಳ ಪ್ರಿಯ. ಎಲ್ಲಕ್ಕಿಂತ ಮಿಗಿಲಾಗಿ ಮಹಾಭಾರತವೆಂದರೆ ನನಗೆ ಪರಮ ಹುಚ್ಚು. ರಷ್ಯಾದ ಸಾಹಿತ್ಯ ಕೃತಿಗಳು, ಭಾರತದ ಗಜಲ್-ಕವ್ವಾಲಿ ಮುಂತಾದ ಇತರ ಸಾಹಿತ್ಯವನ್ನು ಓದುತ್ತಿರುತ್ತೇನೆ. ಸರಳವಾಗಿ ಹೇಳಬೇಕೆಂದರೆ, ಹುರುಳಿರುವ ಯಾವುದೇ ಸಾಹಿತ್ಯ ಬಹಳ ಇಷ್ಟಪಟ್ಟು ಓದುತ್ತೇನೆ. ಅದು ನನ್ನ ಅರಿವನ್ನು ಹಿಗ್ಗಿಸುತ್ತದೆ.

ನೃತ್ಯವು ಆತ್ಮ ಪರಮಾತ್ಮನ ನಡುವೆ ಸಂಬಂಧಸೇತುವಾಗಿಯೂ ಒದಗಿಬರುತ್ತದೆ ಎಂದು ಓದಿದ್ದೇನೆ. ಇದು ವಿಶ್ವದ ಎಲ್ಲೆಡೆಯೂ ಇರುವ ಒಂದು ಗ್ರಹಿಕೆ. ನಾನು ಈ ವಿಶ್ವದ ಶಕ್ತಿಯೊಡನೆ ಸಂಬಂಧ ಸಾಧಿಸುವ ಪ್ರಕ್ರಿಯೆಯ ಬಗ್ಗೆ ಬೇರೆ ಬೇರೆ ಸಾಹಿತ್ಯ, ತತ್ತ್ವಶಾಸ್ತ್ರದಲ್ಲಿ ಚರ್ಚೆಯಾಗಿರುವುದನ್ನು ಗಮನಿಸುವೆ. ಈ ಪ್ರಕ್ರಿಯೆಯನ್ನು ಸಾಂಕೇತಿಕತೆಯೊಂದಿಗೆ ಭಾರತದ ಸಾಂಸ್ಕೃತಿಕ ಕ್ಷೇತ್ರದಲ್ಲಿ ಬಹಳ ಸುಂದರವಾಗಿ ವಿವರಿಸಲಾಗಿದೆ. ವಿಶ್ವಾತ್ಮಕ ಶಕ್ತಿಯ ಸಾಂಕೇತಿಕತೆ ಹಾಗೂ ಅವುಗಳನ್ನು ಪ್ರತಿನಿಧಿಸುವ ದೇವರ ಪರಿಕಲ್ಪನೆಯೊಂದಿಗೆ ಜನರಿಗೆ ಹತ್ತಿರವಾಗಿದೆ. ಅವೆಲ್ಲ ನಮ್ಮ ಜೀವನದಲ್ಲಿರುವ ಶಕ್ತಿಸಂಕೇತಗಳೇ ಆಗಿವೆ. ಸೂಕ್ಷ್ಮ ಮತ್ತು ಬೃಹತ್ ಶಕ್ತಿಯ ನಡುವಿನ ಸಂವಹನ ಪ್ರಕ್ರಿಯೆಯ ವಿವರಣೆಯೂ ಇದನ್ನೇ ಹೇಳುತ್ತದೆ.

◆ ನೃತ್ಯ ಕ್ಷೇತ್ರದಲ್ಲಿ ನಿಮಗಿಷ್ಟವಾದವರು, ನಿಮ್ಮನ್ನು ಪ್ರಭಾವಿಸಿದವರು ಯಾರು?

ಹಿರಿಯ ನೃತ್ಯಕಲಾವಿದೆಯರನ್ನು ನಾನು ಆಸ್ಥೆಯಿಂದ ಗಮನಿಸುತ್ತೇನೆ. ನನ್ನ ಗುರುಗಳಾದ ಲೀಲಾ ಸ್ಯಾಮ್‌ಸನ್ ಅವರ ನೃತ್ಯ, ಅವರ ಘನತೆಯ ವ್ಯಕ್ತಿತ್ವ



ಎಲ್ಲವೂ ನನ್ನನ್ನು ಬಹಳ ಪ್ರಭಾವಿಸಿವೆ. ಮಾಳವಿಕಾ ಸಾರುಕ್ಕೈ ಅವರ ಶಿಸ್ತು, ನೃತ್ಯ, ಶಕ್ತಿಯನ್ನು ಕಂಡು ವಿಸ್ಮಯಗೊಳ್ಳುವೆ. ಪ್ರಿಯದರ್ಶಿನಿ ಗೋವಿಂದನ್, ಚಿತ್ರಾ ವಿಶ್ವೇಶ್ವರ, ಸುಧಾರಾಣಿ ರಘುಪತಿ ಕೂಡ. ಯುವ ಕಲಾವಿದರ ನೃತ್ಯವನ್ನೂ ನೋಡುತ್ತೇನೆ. ಒಬ್ಬೊಬ್ಬರ ಪ್ರಯತ್ನ ಒಂದೊಂದು ದಿಕ್ಕಿನಲ್ಲಿ ಸಾಗುತ್ತದೆ. ಭಾರತೀಯ ಕಲಾಪ್ರಕಾರಗಳೆಂದರೆ ಇಷ್ಟ. ಕೇರಳದ ಕಥಕಳಿ, ಮೋಹಿನಿಯಾಟ್ಟಂ, ಕೂಡಿಯಾಟ್ಟಂ ನೋಡಿ ಅದರ ವೈಭವ ಕಂಡು ಬೆರುಗುಗೊಳ್ಳುವೆ. ಒಡಿಸ್ಸಿಯಲ್ಲಿ ರಾಗತಾಳಗಳ ಸಮನ್ವಯದ ಲಾಲಿತ್ಯಕ್ಕೆ ಮಾರುಹೋಗಿರುವೆ.

ನೃತ್ಯವೆಂದರೆ ಅದು ನನ್ನೊಳಗಿನ ಶಕ್ತಿ. ನನ್ನಲ್ಲಿ ಸುಪ್ತವಾಗಿರುವ ಪ್ರಜ್ಞೆಯನ್ನು ಅದು ಬೆಳಗುತ್ತದೆ. ಜಾಗೃತವಾಗಿರಲು, ನನ್ನೊಳಗಿನ ಸಂತೋಷವನ್ನು ಕಂಡುಕೊಳ್ಳಲು ಇರುವ ಮಾಧ್ಯಮ. ಅದು ಬಿಡುವಾಗಿದ್ದಾಗ ಮಾಡುವ ಒಂದು ಕಾರ್ಯಕ್ರಮವಲ್ಲ. ನನ್ನ ಪಾಲಿಗೆ ಅದು ಮೂಲಭೂತ ಅಗತ್ಯವಾಗಿದೆ. ನಾನು ಬದುಕಬೇಕಾದರೆ ಆಹಾರ, ಉಸಿರು ಎಷ್ಟು ಅಗತ್ಯವೋ, ನೃತ್ಯವೂ ನನ್ನ ದೇಹ ಮನಸ್ಸು ಮತ್ತು ಆತ್ಮಕ್ಕೆ ಅಷ್ಟೇ ಅಗತ್ಯ.

◆ ನಿಮ್ಮ ಮುಂದಿನ ಯೋಜನೆಗಳೇನು?

ಗೊತ್ತಿಲ್ಲ. ಇಂದಿನ ದಿನ ಮುಖ್ಯ. ಮುಂದೆ ಹೇಗೆ ಬರುವುದೋ ಹಾಗೆ. ●